# ಕರ್ನಾಟಕ ಸಹಕಾರ ಕುಕ್ಕುಟ ಮಹಾ ಮಂಡಳ.ನಿ,


**ನೊಂದಣಿ ಸಂಖ್ಯೆ:ಓಟಿಸಿ/144/ಹೆಚ್‌ಇಟಿ/94-95/ದಿನಾಂಕ:15.3.1995**

**ಕರ್ನಾಟಕ ಸರ್ಕಾರ ಸ್ವಾಮ್ಯಕ್ಕೊಳಪಟ್ಟ ಸಂಸ್ಥೆ**

**ನಂ.೫೨, ದಂಡು ಪ್ರದೇಶ, ರೈಲ್ವೆ ನಿಲ್ದಾಣ ರಸ್ತೆ,(ಕ್ವೀನ್ಸ್ ರಸ್ತೆ ),ಪಶು ಆಸ್ಪತ್ರೆ ಆವರಣ,ಬೆಂಗಳೂರು-560 052.**

**ದೂರವಾಣಿ ಸಂಖ್ಯೆ: 080-2950 8777 / 2228 2218, E-ಮೇಲ್ ವಿಳಾಸ** mdkcpfbangalore@gmail.com

**Website:kcpfpoultry.org**


---

ಸಂಖ್ಯೆ: ವ್ಯನಿ: ಕಸಕುಮಮಂ:ಕೋವೊ&ಮಾಂ.ಮಾರಾಟ ಮಳಿಗೆ:2021-22. ದಿ:19.6.2021

## ಪ್ರಕಟಣೆ

ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳದ ವತಿಯಿಂದ ಆರಂಭಿಸಲಾಗುವ ಕೋಳಿ ಮಾಂಸ ಮತ್ತು ಮೊಟ್ಟೆ ಮಾರಾಟ ಮಳಿಗೆಗಳನ್ನು ಗುತ್ತಿಗೆ ಆಧಾರದ ಮೇಲೆ ಪಡೆದುಕೊಂಡು, ಕೋಳಿ ಮಾಂಸ ಮತ್ತು ಮೊಟ್ಟೆ ಮಾರಾಟ ಮಾಡಲು ಆಸಕ್ತ ಸಾರ್ವಜನಿಕರು ಹಾಗೂ ಪ್ರಾಥಮಿಕ ಕೋಳಿ ಸಾಕಾಣಿಕೆದಾರರು ಮತ್ತು ಮಾರಾಟದಾರರ ಸಹಕಾರ ಸಂಘಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿ, #೫೨, ಕ್ವೀನ್ಸ್ ರಸ್ತೆ, ದಂಡು ಪ್ರದೇಶ, ಬೆಂಗಳೂರು–560 052 ರವರ ಕಛೇರಿಯಿಂದ **ದಿ:23.6.2021 ರಿಂದ 20.7.2021** ರವರೆಗೆ ಕಛೇರಿ ಸಮಯದಲ್ಲಿ **ಅರ್ಜಿ ಶುಲ್ಕ ರೂ.500/-ಗಳನ್ನು** ನೀಡಿ ಪಡೆಯಬಹುದು ಅಥವಾ **ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿ, ಬೆಂಗಳೂರು** ರವರ ಹೆಸರಿನಲ್ಲಿ **ರೂ.600/- ಗಳ ಪೋಸ್ಟಲ್ ಆರ್ಡರ್** ಸಲ್ಲಿಸಿ ಅಂಚೆ ಮೂಲಕ ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು **ದಿ:26.7.2021ರ ಸಂಜೆ 5.00 ಗಂಟೆಯೊಳಗೆ** ಮೇಲ್ಕಂಡ ವಿಳಾಸಕ್ಕೆ ಸಲ್ಲಿಸುವುದು. ಕೋಳಿ ಮಾಂಸ ಮತ್ತು ಮೊಟ್ಟೆ ಮಾರಾಟ ಮಳಿಗೆಗಳನ್ನು ಬೆಂಗಳೂರು ನಗರ, ಮೈಸೂರು, ಕೋಲಾರ, ಹಾಸನ, ಶಿವಮೊಗ್ಗ, ಬೆಳಗಾವಿ, ಕಲಬುರಗಿ, ರಾಮನಗರ, ಚಿತ್ರದುರ್ಗ ನಗರಗಳಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : **080-2950 8777**/ 2228 2218 ಕ್ಕೆ ಸಂಪರ್ಕಿಸಬಹುದು.

ಸಹಿ/–

ವ್ಯವಸ್ಥಾಪಕ ನಿರ್ದೇಶಕರು.

ಅರ್ಜಿ ಸಂಖ್ಯೆ___

ಮಾದರಿ ಅರ್ಜಿ

# ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿ, ಬೆಂಗಳೂರು

2019-20 ನೇ ಸಾಲಿನಲ್ಲಿ ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ನಿಯಮಿತ ಬೆಂಗಳೂರು ನಗರ ಹಾಗೂ ಇತರ ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸಲಾದ ಮೊಟ್ಟೆ ಮತ್ತು ಮಾಂಸ ಮಾರಾಟ ಮಳಿಗೆಯನ್ನು ಫ್ರಾಂಚೈಸಿ ಹಾಗೂ ಗುತ್ತಿಗೆ ಆಧಾರದಲ್ಲಿ ಪಡೆಯಲು

ಫೋಟೋ

**ಅರ್ಜಿ ನಮೂನೆ.**

| | | |
|---|---|---|
| 1 | ಅರ್ಜಿದಾರರ ಹೆಸರು ಹಾಗೂ ವಿಳಾಸ | |
| 2 | ಅರ್ಜಿದಾರರ ತಂದೆ/ಪೋಷಕರ/ಗಂಡನ ಹೆಸರು | |
| 3 | ದೂರವಾಣಿ / ಇ–ಮೇಲ್/ಮೊಬೈಲ್ ಸಂಖ್ಯೆ | |
| 4 | ಅರ್ಜಿದಾರರ ಗುರುತಿನ ಚೀಟಿ/ಆಧಾರ ಕಾರ್ಡ್ ಸಂಖ್ಯೆ | |
| 5 | ವಿದ್ಯಾರ್ಹತೆ | |
| 6 | ಎಸ್.ಸಿ/ಎಸ್.ಟಿ, ಅಲ್ಪ ಸಂಖ್ಯಾತರು/ ವಿಕಲಚೇತನರು / ಸಾಮಾನ್ಯ ವರ್ಗದ ಅರ್ಜಿದಾರರು, ಸಂಬಂಧಿಸಿದ ದಾಖಲೆಗಳು ಲಗತ್ತಿಸುವುದು. | |
| 7 | ಮಾಂಸ/ಮೊಟ್ಟೆ ಮಾರಾಟದಲ್ಲಿ ಅನುಭವ | |
| 8 | ಅರ್ಜಿದಾರರ ಬ್ಯಾಂಕ್ ಖಾತೆ ವಿವರ ಹಾಗೂ ಕಳೆದ 6 ತಿಂಗಳ ವ್ಯವಹಾರದ ಪ್ರತಿ. | |
| 9 | ಪ್ಯಾನ್ ಕಾರ್ಡ್ ವಿವರ | |
| 10 | ಕೋಳಿ ಹಾಗೂ ಮೊಟ್ಟೆ ಸ್ಟಾಕ್ ಖರೀದಿಗೆ ಬಂಡವಾಳದ ಹೂಡಿಕೆಯ ಸಾಮರ್ಥ್ಯ (ರೂಗಳಲ್ಲಿ) | |

| | | |
|---|---|---|
| 11 | ಮಾರಟ ಮಳಿಗೆಯನ್ನು ತೆರೆಯಲು ಉದ್ದೇಶಿಸಿರುವ ಸ್ಥಳ ( ಈ ಕೆಳಗಿನ ಸ್ಥಳಗಳಲ್ಲಿ ಮಾತ್ರ)<br>1.ಬೆಂಗಳೂರು ನಗರ 2.ಮೈಸೂರು 3.ಕೋಲಾರ 4.ಹಾಸನ 5.ಶಿವಮೊಗ್ಗ 6.ಬೆಳಗಾವಿ 7.ಕಲಬುರಗಿ 8.ರಾಮನಗರ 9.ಚಿತ್ರದುರ್ಗ | |
| 12 | ಮುನ್ಸಿಪಾಲಿಟಿಯ ಲೈಸನ್ಸ್ ವಿವರ | |
| 13 | ಮೊಟ್ಟೆ ಹಾಗೂ ಕೋಳಿಗಳನ್ನು ಯಾವ ಫಾರಂ / ಕಂಪನಿಗಳಿಂದ ಖರೀದಿಸಲು ಯೋಜಿಸಲಾಗಿದೆ. | |
| 14 | ಜಿ.ಎಸ್.ಟಿ ಲೈಸನ್ಸ್ ವಿವರಗಳು | |

ನಾನು ಈ ಮೂಲಕ ತಿಳಿಸುವುದೇನೆಂದರೆ ಈ ಅರ್ಜಿಯಲ್ಲಿ ನೀಡಲಾದ ವಿವರಗಳು ಸತ್ಯವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ ಹಾಗೂ ಈ ಕೆಳಕಂಡ ಷರತ್ತುಗಳನ್ನು ಒಪ್ಪಿರುತ್ತೇನೆ.

(೧) ನಾನು ರೂ.50,000/- ಗಳ ಠೇವಣಿ ಮೊತ್ತವನ್ನು ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿಯಮಿತಕ್ಕೆ ಈ ಯೋಜನೆಗಾಗಿ ಠೇವಣಿ ಮೊತ್ತವಾಗಿ ಜಮೆ ಮಾಡುತ್ತೇನೆ.

(೨) ನಾನು ರೂ.30,000/- ವಾರ್ಷಿಕವಾಗಿ ಕುಕ್ಕುಟ ಮಹಾಮಂಡಳ ನಿಯಮಿತ ಇಲ್ಲಿಗೆ ರಾಯಲ್ಟಿ ರೂಪದಲ್ಲಿ ಪಾವತಿ ಮಾಡುತ್ತೇನೆ.

(೩) ನಾನು ಕುಕ್ಕುಟ ಮಹಾಮಂಡಳ. ನಿಯಮಿತ ಮಂಡಿಸಿರುವ ಎಲ್ಲಾ ಷರತ್ತುಗಳನ್ನು ಒಪ್ಪಿ ರೂ.100/- ಛಾಪಾ ಕಾಗದಲ್ಲಿ ಒಂದು ವರ್ಷಗಳ ಕಾಲ ಮಾರಾಟ ಮಳಿಗೆಯನ್ನು ಗುತ್ತಿಗೆ ಆಧಾರದ ಮೇರೆಗೆ ಒಪ್ಪಂದ ಮಾಡಿಕೊಳ್ಳುತ್ತೇನೆ.

(೪) ಜಿ.ಎಸ್.ಟಿ ಸಂಖ್ಯೆಯನ್ನು ಪಡೆದುಕೊಳ್ಳಲು ಬದ್ಧನಿರುತ್ತೇನೆ.

ದಿನಾಂಕ:

ಸ್ಥಳ: ಸಹಿ/-

# ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ನಿಯಮಿತ

## ಕೋಳಿ ಮಾಂಸ ಮತ್ತು ಮೊಟ್ಟೆ ಮಾರಾಟ ಮಳಿಗೆಗಳ ಪ್ರಾಯೋಗಿಕವಾಗಿ ಸ್ಥಾಪನೆ ಮಾಡಲು ಮಾರ್ಗಸೂಚಿಗಳು

**ಉದ್ದೇಶ:-**

ಮಾರಾಟ ಮಳಿಗೆಯ ಸ್ಥಾಪನೆ ಮೂಲ ಉದ್ದೇಶ, ಸಾರ್ವಜನಿಕರಿಗೆ ಉತ್ತಮವಾದ ಗುಣಮಟ್ಟದ ಕೋಳಿ ಮಾಂಸ ಹಾಗೂ ಮೊಟ್ಟೆಯನ್ನು ಪೂರೈಸುವುದು.

**ಮಾರ್ಗಸೂಚಿಗಳು:-**

**(1)** 10 ಮಾರಾಟ ಮಳಿಗೆಯನ್ನು ರಾಜ್ಯಾದ್ಯಂತ 8 ನಗರ ಪ್ರದೇಶಗಳಲ್ಲಿ ಹಾಗೂ 2 ಅನ್ನು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸೂಕ್ತ ಸ್ಥಳದಲ್ಲಿ ಕುಕ್ಕುಟ ಮಹಾಮಂಡಳಿ ಹೆಸರಿನಲ್ಲಿ ಸ್ಥಾಪಿಸುವುದು.

(೨) ಒಂದು ಮಾರಾಟ ಮಳಿಗೆ ಸ್ಥಾಪನೆಗೆ ರೂ.5.00 ಲಕ್ಷ ನಿಗಧಿಯಾಗಿದ್ದು, 2019-20 ನೇ ಸಾಲಿನಲ್ಲಿ ಬಿಡುಗಡೆಯಾದ ರೂ.50.00 ಲಕ್ಷ ಅನುದಾನದಲ್ಲಿ ಅನುಷ್ಠಾನಗೊಳಿಸುವುದು.

(೩) ಕುಕ್ಕುಟ ಮಹಾಮಂಡಳಿಯ 8 ನಗರ ಪ್ರದೇಶಗಳಲ್ಲಿ ಹಾಗೂ 2 ಅನ್ನು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಾರಾಟ ಮಳಿಗೆಯನ್ನು ಬಾಡಿಗೆ ಪಡೆದು ಸ್ಥಾಪಿಸುವುದು.

(4) ಕುಕ್ಕುಟ ಮಹಾಮಂಡಳಿಯು ಮಳಿಗೆಯ ಠೇವಣಿ ಮೊತ್ತವನ್ನು ಮಾರಾಟ ಮಳಿಗೆ ಮಾಲೀಕರಿಗೆ ನೀಡಿ, ಬಾಡಿಗೆ ಕರಾರು ಒಪ್ಪಂದ ಪತ್ರವನ್ನು ಮಾಡಿಕೊಳ್ಳುವುದು, ಬಾಡಿಗೆ ಮೊತ್ತ ಹಾಗೂ ಠೇವಣಿ ಮೊತ್ತವನ್ನು ಅಕ್ಕಪಕ್ಕ ಅಂಗಡಿಗಳಲ್ಲಿ ಹಾಲಿ ನೀಡುತ್ತಿರುವ ಬಾಡಿಗೆ ಹಾಗೂ ಠೇವಣಿ ಮೊತ್ತವನ್ನು ಆಧಾರವಾಗಿ ಇಟ್ಟುಕೊಂಡು ಕುಕ್ಕುಟ ಮಹಾಮಂಡಳದ ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಧರಿಸುವುದು. ಮಾರಾಟ ಮಳಿಗೆಯ ಮಾಲೀಕರೊಂದಿಗೆ 5 ವರ್ಷದ ಅವಧಿಗೆ ಒಪ್ಪಂದ ಮಾಡಿಕೊಳ್ಳುವುದು ಹಾಗೂ ಪರಸ್ಪರ ಒಪ್ಪಿಗೆ ಮೇಲೆ ಮುಂದುವರೆಸಲು ಅನುಮತಿಸಿಕೊಳ್ಳುವುದು.

(5) ಮಾರಾಟ ಮಳಿಗೆಯ ವಿಸ್ತೀರ್ಣವು ಕನಿಷ್ಠ 300 ಚದರ ಅಡಿಯಿಂದ ಗರಿಷ್ಠ 1000 ಚದರ ಅಡಿಗಳವರೆಗೆ ಇರುವುದು.

(6) ಮಾರಾಟ ಮಳಿಗೆಯ ಉಪಕರಣಗಳನ್ನು ಕರ್ನಾಟಕ ಪಾರದರ್ಶಕ ಅಧಿನಿಯಮ 1999 ನಿಯಮ 2000 (KTPP Act 1999, Rule 2000) ನಿಮಯಾನುಸಾರ ಖರೀದಿಸುವುದು.

(7) ಮಾರಾಟ ಮಳಿಗೆ ಸಂಪೂರ್ಣವಾಗಿ ಕುಕ್ಕುಟ ಮಹಾಮಂಡಳದ ಸ್ವತ್ತಾಗಿರುತ್ತದೆ.

(8) ಮಾರಾಟ ಮಳಿಗೆಯನ್ನು ಸ್ಥಾಪಿಸಲು ಉದ್ದೇಶಿಸಿರುವ ಸ್ಥಳಕ್ಕೆ ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿ, ಪ್ರಾದೇಶಿಕ ಕೇಂದ್ರ, ಸಹಾಯಕ ನಿರ್ದೇಶಕರವರು ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿ **Feasibility** ವರದಿಯನ್ನು ಸಲ್ಲಿಸುವುದು.

(9) ಮಾರಾಟ ಮಳಿಗೆಯನ್ನು ಸ್ಥಾಪಿಸಿದ ನಂತರ, ಸಾರ್ವಜನಿಕವಾಗಿ ಪ್ರಕಟಣೆ ನೀಡಿ ಅರ್ಜಿ ಆಹ್ವಾನಿಸಿ ಆಡಳಿತ ಮಂಡಳಿಯ ಸಭೆಯಲ್ಲಿ ಅರ್ಜಿ ಸಲ್ಲಿಸಿದ ಆಸಕ್ತ ಗುತ್ತಿಗೆದಾರರು ಅಥವಾ ಪ್ರಾಥಮಿಕ ಕೋಳಿ ಸಾಕಾಣಿಕೆದಾರರ ಸಹಕಾರ ಸಂಘಗಳನ್ನು ಆಯ್ಕೆ ಮಾಡುವುದು.

(10) ಮಾರಾಟ ಮಳಿಗೆ ಪೂರ್ಣ ಪ್ರಮಾಣದಲ್ಲಿ ನಿರ್ಮಿಸಿದ ನಂತರ, ಗುತ್ತಿಗೆ ಆಧಾರದ ಮೇಲೆ ಆಯ್ಕೆಯಾದ, ಪ್ರಾಥಮಿಕ ಕೋಳಿ ಸಹಕಾರ ಸಂಘಗಳಿಗೆ ಅಥವಾ ಗುತ್ತಿಗೆದಾರರಿಗೆ ಒಂದು ವರ್ಷದವರೆಗೆ ಮಾಹೆಯಾನ ಬಾಡಿಗೆಗೆ ಹಾಗೂ ಠೇವಣಿ ಮೊತ್ತವನ್ನು ಪಡೆದು ರೂ.100/-ರ ಛಾಪಾ ಕಾಗದದಲ್ಲಿ ಒಪ್ಪಂದ ಕರಾರು ಪತ್ರವನ್ನು ಮಾಡಿಸಿ ನೀಡಬೇಕು ಹಾಗೂ ಪರಸ್ಪರ ಒಪ್ಪಿಗೆ ಇದ್ದಲ್ಲಿ 5 ವರ್ಷದ ಅವಧಿಗೆ ಮುಂದುವರೆಸಲು ಅವಕಾಶ ಕಲ್ಪಿಸಿಕೊಳ್ಳುವುದು.

(11) ಗುತ್ತಿಗೆ ಪಡೆದವರು ಮಾರಾಟ ಮಳಿಗೆಗೆ ನಿಗದಿಪಡಿಸಿದ ರೂ.50000/- ಠೇವಣಿ ಮೊತ್ತ ರಾಯಲ್ಟಿ ರೂ.30,000/- ಮೊತ್ತವನ್ನು ಮುಂಗಡವಾಗಿ ನೀಡುವುದು ಹಾಗೂ ಪ್ರತಿ ಮಾಹೆ 5ನೇ ತಾರೀಖಿನೊಳಗೆ ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳಿಗೆ ಬಾಡಿಗೆ ಮೊತ್ತವನ್ನು ಪಾವತಿಸುವುದು. ಠೇವಣಿ ಮೊತ್ತ ಹಾಗೂ ರಾಯಲ್ಟಿ ಮೊತ್ತಗಳನ್ನು ಪ್ರತಿ ವರ್ಷ ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿಯಮಿತವು ಪರಿಷ್ಕರಿಸುವುದು.

(12) ವಿದ್ಯುತ್‌ಚ್ಛಕ್ತಿ ಹಾಗೂ ನೀರಿನ ಬಿಲ್ ಹಾಗೂ ಇತರೆ ತೆರಿಗೆಗಳನ್ನು ಸಂಬಂಧಪಟ್ಟ ಇಲಾಖೆಗೆ ಪ್ರತಿ ಮಾಹೆ ಗುತ್ತಿಗೆದಾರರು ತಪ್ಪದೇ ಪಾವತಿಸುವುದು.

(13) ಮೊಟ್ಟೆ ಹಾಗೂ ಕೋಳಿಗಳನ್ನು ಪ್ರಾಥಮಿಕ ಸಹಕಾರ ಸಂಘಗಳಿಂದ / ರೈತರಿಂದ ಆದ್ಯತೆ ಮೇರೆಗೆ ಗುತ್ತಿಗೆದಾರರು ಖರೀದಿಸಿ, ಮಾರುಕಟ್ಟೆ ದರದಲ್ಲಿ ಮಾರಾಟ ಮಾಡುವುದು.

(14) ಕುಕ್ಕುಟ ಮಹಾಮಂಡಳಿಯಲ್ಲಿ ಅಥವಾ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಸ್ವಂತ ಜಾಗ ಲಭ್ಯವಿದ್ದಲ್ಲಿ ಮಾರಾಟ ಮಳಿಗೆಯನ್ನು ನಿರ್ಮಿಸುವುದು.

(15) ಗುತ್ತಿಗೆದಾರರು ಒಂದು ವರ್ಷದ ಗುತ್ತಿಗೆ ಅವಧಿಯ ಮೊದಲೆ ಮಳಿಗೆಯನ್ನು ನಡೆಸದೆ ಸ್ಥಗಿತಗೊಳಿಸಿದರೆ ಅವರ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದು.

(16) ಮಹಾಮಂಡಳ, ಮಳಿಗೆ ಮಾಲೀಕ ಹಾಗೂ ಗುತ್ತಿಗೆದಾರರ ಮಧ್ಯೆ ತಕರಾರು ಬಂದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ರವರಿಗೆ ಮೇಲ್ಮನವಿ ನೀಡುವುದು, ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ರವರ ತೀರ್ಮಾನ ಅಂತಿಮವಾಗಿರುತ್ತದೆ. ಕಟ್ಟಡ ಮಾಲೀಕರು, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ಹಾಗೂ ಗುತ್ತಿಗೆದಾರರು ಒಪ್ಪಂದದಲ್ಲಿ ಹಿಂದೆ ಸರಿಯುವ ಸಂದರ್ಭ ಉಂಟಾದಲ್ಲಿ ಮೂರು ತಿಂಗಳಿಗೆ ಕಡಿಮೆ ಇಲ್ಲದಂತೆ ನೋಟೀಸ್ ನೀಡಿ ಒಪ್ಪಂದವನ್ನು ಮುಕ್ತಾಯಗೊಳಿಸಿಕೊಳ್ಳಬಹುದು.

(17) ಕೋಳಿ ಮಾಂಸ ಹಾಗೂ ಮೊಟ್ಟೆ ಅಂಗಡಿಯನ್ನು ಚಾಲ್ತಿಯಲ್ಲಿರುವ ನಿಯಮಗಳನುಸಾರ ಗುತ್ತಿಗೆದಾರರು ನಿರ್ವಹಿಸುವುದು, ಯಾವುದೇ ನಿಯಮಗಳನ್ನು ಉಲ್ಲಂಘಿಸಿದ್ದಲ್ಲಿ ಈ ಸಂಬಂಧ ಕಾನೂನಿನಡಿ ವಿಧಿಸುವ ದಂಡ ಅಥವಾ ಶಿಕ್ಷೆಗೆ ಗುತ್ತಿಗೆದಾರರೆ ಹೊಣೆಗಾರರು. ಕಟ್ಟಡ ಮಾಲೀಕರು ನಿಯಮ ಉಲ್ಲಂಘಿಸಿದಲ್ಲಿ ಕಾನೂನು ರೀತ್ಯಾ ದಂಡ ಅಥವಾ ಶಿಕ್ಷೆಗೆ ಹೊಣೆಗಾರರಾಗಿರುತ್ತಾರೆ.

(18) ಸಹಾಯಕ ನಿರ್ದೇಶಕರು, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿ, ಪ್ರಾದೇಶಿಕ ಕೇಂದ್ರ, ರವರು ಗುತ್ತಿಗೆ ಅವಧಿಯಲ್ಲಿ ನಿಗಧಿತ ದಿನಾಂಕಗಳಂದು ಮಳಿಗೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರತಿ ತಿಂಗಳು

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿಯಮಿತ ರವರಿಗೆ ವರದಿ ನೀಡುವುದು.

(19)ಸದರಿ ಮಳಿಗೆಗಳಲ್ಲಿ ಕೋಳಿ ಮೊಟ್ಟೆ, ಕೋಳಿ ಮಾಂಸ ಹಾಗೂ ಕೋಳಿಗಳ ಉಪ ಉತ್ಪನ್ನಗಳನ್ನು ಮಾತ್ರ ಮಾರಾಟ ಮಾಡುವುದು.

(20)ಸಹಾಯಕ ನಿರ್ದೇಶಕರು / ಮುಖ್ಯ ಪಶುವೈದ್ಯಾಧಿಕಾರಿ, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿ, ಪ್ರಾದೇಶಿಕ ಕೇಂದ್ರದವರು ಯೋಜನಾ ಅನುಷ್ಠಾನಾಧಿಕಾರಿಗಳಾಗುತ್ತಾರೆ.

(21)ಕಾಲಕಾಲಕ್ಕೆ ಚಾಲ್ತಿ ನಿಯಮಗಳಲ್ಲಿ ಬದಲಾವಣೆ, ಬಾಡಿಗೆ ಪರಿಷ್ಕರಣೆ ಮತ್ತು ರಾಯಲ್ಟಿ ಮೊತ್ತ ಪರಿಷ್ಕರಣೆಯನ್ನು ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ.ನಿಯಮಿತದ ಆಡಳಿತ ಮಂಡಳಿಯ ಸಭೆಯಲ್ಲಿ ತೀರ್ಮಾನಿಸಿ ಜಾರಿಗೆ ತರುವುದು.

ವ್ಯವಸ್ಥಾಪಕ ನಿರ್ದೇಶಕರು.

Egg & Meat Retail outlet Franchise application